



# ಅಲೊವೆರಾ

## ಜಗ್ಗದ ಬಗ್ಗದ ಸಸ್ಯಕುಲ

**ಎಂಥದ್ದೇ ಪರಿಸ್ಥಿತಿಯಲ್ಲೂ ಬದುಕಬಲ್ಲ ಅಲೊವೆರಾದ ಮೂಲ ಕಂಡುಬರುವುದು ಈಜಿಪ್ಟಿನಲ್ಲಿ. ಔಷಧೀಯ ಕಾರಣಗಳಿಗೆ ಬಳಕೆಯಾಗುತ್ತಿದ್ದ ಈ ಸಸ್ಯದಲ್ಲಿ ಹಲವು ಪ್ರಜಾತಿಗಳಿದ್ದು, ಅವು ಒಳಾಂಗಣ ವಿನ್ಯಾಸಕ್ಕೂ ಸೈ ಎನಿಸಿಕೊಂಡಿವೆ.**

■ ಸೀಮಾ ಹೆಗಡೆ



‘ಅಲೊವೆರಾ’– ಈ ಸಸ್ಯದ ಬಗ್ಗೆ ಗೊತ್ತಿಲ್ಲದವರನ್ನು ಹುಡುಕುವುದೆಂದರೆ ಸಾವಿಲ್ಲದ ಮನೆಯಿಂದ ಸಾಸಿವೆ ತಂದಂತೆಯೇ! ಕೈತೋಟ–ಒಳಾಂಗಣದಲ್ಲಿ, ಆಲಂಕಾರಿಕವಾಗಿ–ಔಷಧಿಗಾಗಿ, ಲೋಳೆಸರದ ಪ್ರಸಿದ್ಧಿ ಹರಡಿರುವಂಥದ್ದು.

‘ಅಲೊ ವೆರಾ’ ಎನ್ನುವುದೊಂದು ದ್ವಿನಾಮ. ‘ಅಲೊ’ ಎನ್ನುವುದು ಜಾತಿ (ಜೀನಸ್)ಯಾದರೆ, ‘ವೆರಾ’ ಎನ್ನುವುದು ಪ್ರಭೇದ (ಸ್ಪೀಷೀಸ್). ಅರೇಬಿಕ್ ಭಾಷೆಯಿಂದ ಹುಟ್ಟಿದ ಅಲೊವೆರಾ ಶಬ್ದಕ್ಕೆ ‘ಮಿರುಗುವ ಕಹಿ ವಸ್ತು’ ಎಂಬ ಅರ್ಥವಿದೆ (ಬಹುಶಃ ಕಹಿ ರುಚಿಯ ಮಿರುಗುವ ಲೋಳೆಯ ಕಾರಣಕ್ಕಾಗಿ). ಸಕ್ಯುಲೆಂಟ್ ಸಸ್ಯಗಳ ಪೈಕಿಯ ಅಲೊಗಳದ್ದು ಹತ್ತಿರತ್ತಿರ 600 ಪ್ರಭೇದಗಳಿರುವ ಕುಲ; ತವರು ಉತ್ತರ ಆಫ್ರಿಕಾವಾದರೂ ಜಗತ್ತಿನಾದ್ಯಂತ ಉಷ್ಣ, ಸಮಶೀತೋಷ್ಣ, ಶುಷ್ಕ, ಹಿಮ ಪ್ರದೇಶದಲ್ಲಿಯೂ ನಾಟಿಯಾಗಿ ಬೆಳೆಯುತ್ತವೆ.

ಈಜಿಪ್ಟ್, ಗ್ರೀಸ್, ಚೀನಾ, ಜಪಾನ್, ಭಾರತ ಸೇರಿದಂತೆ ಹಳೆಯ ನಾಗರಿಕತೆಯ ಅವಶೇಷಗಳಲ್ಲಿ, ಕಲ್ಲಿನ ಶಾಸನಗಳಲ್ಲಿ, ತಾಳೆಗರಿಗಳಲ್ಲಿ ಇಣುಕುವ ಅಲೊವೆರಾದ ಬಳಕೆಗೆ 6000 ವರ್ಷಗಳ ಇತಿಹಾಸವಿದೆ. ಅತ್ಯಂತ ಹಳೆಯ ದಾಖಲೆ ಬೊಟ್ಟು ಮಾಡುವುದು ಈಜಿಪ್ಷಿಯನ್ ನಾಗರಿಕತೆಯೆಡೆಗೆ.

ಯಾವುದೇ ಪರಿಸ್ಥಿತಿಯಲ್ಲೂ ಬದುಕುವ ಅಲೊವೆರಾ ಈಜಿಪ್ಷಿಯನ್ ಫೆರೋಗಳ ಅಂತ್ಯಕ್ರಿಯೆಯಲ್ಲಿ ಅಮರತ್ವದ ಸಂಕೇತವಾಗಿ ಅವರ ಮುಂದಿನ ಪಯಣಕ್ಕೆ ಉಡುಗೊರೆಯಾಗಿ ಬಳಕೆಯಲ್ಲಿತ್ತಂತೆ. ಜಗತ್ತು ಕಂಡ ಅತ್ಯಂತ ಸುಂದರ ಹೆಣ್ಣು ಈಜಿಪ್ಷಿಯನ್ ರಾಣಿ ಕ್ಲಿಯೋಪಾತ್ರಾಳ ಸೌಂದರ್ಯದ ಗುಟ್ಟು ಇದಂತೆ. ಅಲೆಕ್ಸಾಂಡರ್, ಗಾಯಗೊಂಡಿದ್ದ ತನ್ನ ಸೈನಿಕರ ಉಪಚಾರಕ್ಕೆ ಅಗತ್ಯವಿದ್ದ ಅಲೊವೆರಾ ದೋಚಲು ಸೊಕೋಟ್ರಾ ದ್ವೀಪವನ್ನು ಆಕ್ರಮಣ ಮಾಡಿದ್ದನಂತೆ.

ಈಜಿಪ್ಟ್ ಜೊತೆಗೆ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿದ್ದ ಸುಮೇರಿಯನ್ನರು ಭಾರತ ಸೇರಿದಂತೆ ಏಷ್ಯಾ ಖಂಡಕ್ಕೆ ಲೋಳೆಸರವನ್ನು ಪರಿಚಯಿಸಿರಬೇಕು. ಗಿಡಮೂಲಿಕೆಯಾಗಿ ನಮ್ಮ ಸಾಂಪ್ರದಾಯಿಕ ಪದ್ಧತಿ, ಆಯುಷ್ ಚಿಕಿತ್ಸೆಯಲ್ಲಿ ಲೋಳೆಸರದ ಔಷಧೀಯ ಗುಣಗಳನ್ನು ಸೇರಿಸುತ್ತಾ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಲೋಳೆಸರದ ಕೃಷಿ ಶುರುವಾಗಿದ್ದು ಅಮೆರಿಕದಲ್ಲಿ, ಅವುಗಳ ವಿರೇಚಕ ಗುಣವುಳ್ಳ ‘ಅಲ್ಲೋಯಿನ್’ ಎಂಬ ಹಳದಿ ರಸಕ್ಕಾಗಿ. ನಂತರ ‘ಜೆಲ್’ಗಳ ಉತ್ಪಾದನೆ ಇವುಗಳ ಕೃಷಿಗೆ ಹೆಸರು ತಂದುಕೊಟ್ಟಿತ್ತು. ಇಂದು ತಂಪುಕಾರಕ ‘ಅಲೊ ಜೆಲ್’ ಆಹಾರ, ಸೌಂದರ್ಯವರ್ಧಕಗಳ ಉತ್ಪಾದನೆಯಲ್ಲಿ ಕಡ್ಡಾಯವಷ್ಟೇ! ಇಷ್ಟೆಲ್ಲಾ ಕುತೂಹಲ ಇತಿಹಾಸವಿರುವ ಲೋಳೆಸರ ಕೆಲವೆಡೆ ಸ್ಥಳೀಯ ಸಸ್ಯ ಸಂಪತ್ತನ್ನು ಕಬಳಿಸಿ (invasive) ಬೆಳೆಯುವಷ್ಟರ ಮಟ್ಟಿಗೆ ವ್ಯಾಪ್ತಿಸಿಕೊಂಡಿದೆ. ತೋಟಗಾರಿಕಾ ಬೆಳೆಯಾಗಿ ರಾಜಸ್ಥಾನ, ಆಂಧ್ರಪ್ರದೇಶ, ಗುಜರಾತ್‌ನಲ್ಲಿ ನೂರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ವ್ಯವಸಾಯದಲ್ಲಿದೆ.

ಲೋಳೆಸರದ ಆಲಂಕಾರಿಕ ಬಳಕೆ ಬಗ್ಗೆ ಹೇಳುವುದೇ ಬೇಡ! ನನ್ನಲ್ಲಿರುವ ಲೋಳೆಸರ ಸತ್ತುಹೋಯಿತು ಎಂದು ಯಾರಾದರೂ ಹೇಳಿರುವುದನ್ನು ಕೇಳಿರಲೂ ಸಾಧ್ಯವಿಲ್ಲ; ಅಂತಹ ಗಟ್ಟಿ ಸಸ್ಯವಿದು! ಎಲೆಗಳಲ್ಲೇ ನೀರು ಸಂಗ್ರಹಿಸುವ ಲೋಳೆಸರಕ್ಕೆ ನೀರಿನ ಹಪಹಪಿಯಿಲ್ಲ, ರೋಗ–ಕೀಟದ ಬಾಧೆಯನ್ನು ಕಂಡವರಿಲ್ಲ,

ಅಲೊವೆರಾವನ್ನು ಆಲಂಕಾರಿಕವಾಗಿ ಬೆಳೆಸುವ ಆಸಕ್ತಿಯಿದ್ದರೆ ಹೆಚ್ಚೆಚ್ಚು ಪ್ರಭೇದಗಳನ್ನು ಸಂಗ್ರಹಿಸಿ ಎನ್ನುವುದೊಂದೇ ಸಲಹೆ. ಅದೇ ಹಳೆ ತಿಳಿಹಸುರು ಛಾಯೆಯ ಲೋಳೆಸರ ನೋಡಿ ಬೇಸರ ಬಂದಲ್ಲಿ ನಕ್ಷತ್ರಾಕಾರದ ಕೆಂಪು ಅಂಚಿನ ಎಲೆಗಳುಳ್ಳ ‘ಅಲೊ ಕ್ರಿಸ್ಮಸ್ ಕ್ಯಾರೋಲ್’, ಹುಲಿಯ ಚೂಪು ಹಲ್ಲಿನಂಥ ಎಲೆಗಳುಳ್ಳ ‘ಅಲೊ ಜುವೆನ್ನಾ’, ಬಿಳಿ ಚಿಬ್ಬಿನ ಎಲೆಗಳುಳ್ಳ ‘ಅಲೊ ಡೊರನ್ ಬ್ಲಾಕ್’, ಸೀರೆ ಲೇಸ್‌ನಂತೆ ಬಿಳಿ ಅಂಚು ಹೊಂದಿರುವ ‘ಅಲೊ ಅರಿಸ್ಟಾಟ’, ಹುಲಿಯ ಮೈಯಂತೆ ಪಟ್ಟೆ ಪಟ್ಟೆ ಎಲೆಯ ‘ಅಲೊ ವೆರಿಗೆಟಾ’ ಮುಂತಾದ ಪ್ರಭೇದಗಳನ್ನು ಸಂಗ್ರಹಿಸಿ ಹೆಮ್ಮೆ ಪಡಬಹುದು. ಔಷಧಿಗೆ ಯೋಗ್ಯವಿಲ್ಲದಿದ್ದರೂ ನೋಡಿ ಆನಂದಿಸಲು ಮೋಸವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in